**INDIAN JOURNAL OF HISTORY AND ARCHAEOLOGY**
**ISSN (e):2582-225Xwww.ijha.in**
**Vol-8, Issue -01,January-February, 2026**
**Page No,09-14**
**Peer -Reviewed, Refereed Journal**

# ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ: ಬಿ ರಾಚಯ್ಯ

***.ನಂಜುಂಡಸ್ವಾಮಿ.ಎಂ.[1]**
****ಡಾ.ನರೇಂದ್ರಕುಮಾರ್.ಎಸ್.[2]**

ಬಿ. ರಾಚಯ್ಯ ಅವರು ಎಲ್ಲಾ ಸಮುದಾಯದ ಜನರು ಮೆಚ್ಚುವಂತಹ ವಿಶಾಲ ಹೃದಯದವರು ಹಾಗೂ ಆದರ್ಶ ಗುಣಗಳಲ್ಲಿ ವೈಚಾರಿಕತೆ ಮಾನವೀಯತೆ ಮೌಲ್ಯದ ವ್ಯಕ್ತಿತ್ವದ ಮಾತೃ ಹೃದಯದ ಆದರ್ಶ ಪ್ರಜೆ ಆಗಿದ್ದರಿಂದ ಯಾವುದೇ ಹುದ್ದೆಗಳು ಸಹ ಅವರನ್ನೇ ಹುಡುಕಿ ಬರುತ್ತಿದ್ದವು. ಇದರಿಂದಲೇ ಬಿ.ರಾಚಯ್ಯ ಅವರನ್ನು ರಾಜ್ಯಪಾಲರಾಗಿ ನೇಮಕ ಮಾಡುವ ವಿಷಯದಲ್ಲಿ ರಾಜ್ಯದ ಯಾವುದೇ ಸಮುದಾಯದ ಮುಖಂಡರು ಹಾಗೂ ವಿವಿಧ ರಾಜಕೀಯ ಪಕ್ಷಗಳ ನಾಯಕರು ಸಹ ಅಪಸ್ವರ ಎತ್ತಲಿಲ್ಲ. ಇದೆ ಬಿ.ರಾಚಯ್ಯ ಅವರಿಗೆ ಹುದ್ದೆಯ ನೇಮಕಾತಿಯ ಹಾದಿಯನ್ನು ಸಂಪೂರ್ಣವಾಗಿ ಸುಗಮಗೊಳಿಸಲು ಕಾರಣವಾಯಿತು. ವಿ.ಪಿ ಸಿಂಗ್ ಅವರ ಕೇಂದ್ರ ಸಚಿವ ಸಂಪುಟದ ಶಿಫಾರಸಿಗೆ ಅನುಗುಣವಾಗಿ ರಾಷ್ಟ್ರಪತಿ ಭವನವು 1/2/1990 ರಂದು ಅಧಿಕೃತ ಪ್ರಕಟಣೆಯ ಮೂಲಕ ಬಿ.ರಾಚಯ್ಯ ಅವರನ್ನು ಹಿಮಾಚಲ ಪ್ರದೇಶದ ರಾಜಪಾಲರಾಗಿ ನೇಮಕ ಮಾಡಿ ಆದೇಶ ನೀಡಿತು, ಇದರಿಂದ ಆಗಿಯೇ ಬಿ.ರಾಚಯ್ಯ ಅವರು ರಾಜ್ಯ ರಾಜಕಾರಣದಲ್ಲಿನ ಸಕ್ರಿಯ ರಾಜಕಾರಣದಿಂದ ನಿರ್ಗಮಿಸುವುದು ಅಗತ್ಯ ಮತ್ತು ಅನಿವಾರ್ಯವಾಯಿತು. ವೃತ್ತಿಪರ ರಾಜಕಾರಣಿಯಾಗಿದ್ದವರು ಸಾಮಾನ್ಯವಾಗಿ ಸರ್ವಕಾಲದಲ್ಲಿಯೂ ಜನತೆಯ ಮಧ್ಯೆ ರಾಜಕೀಯ ಚಟುವಟಿಕೆಯಿಂದ ಪ್ರಕಾಶಿಸಲು ಇಚ್ಛೆ ಪಡುತ್ತಾರೆ. ಹೊರತು ಉತ್ಸವ ಮೂರ್ತಿಯಂತೆ ಯಾವುದೋ ಒಂದು ಹುದ್ದೆ ಪಡೆದು ಕಚೇರಿ ಒಂದರಲ್ಲಿ ಮೌನಿಯಾಗಿ ಕುಳಿತುಕೊಳ್ಳಲು ಬಯಸುವುದಿಲ್ಲ ಹಾಗೆಯೇ ಬಿ.ರಾಚಯ್ಯ ಇಂತಹ ಪರಿಸ್ಥಿತಿಯನ್ನು ಒಲ್ಲದ ಮನಸ್ಸಿನಿಂದ ಸ್ವೀಕರಿಸುವುದು ಅನಿವಾರ್ಯತೆಯ ಪರಿಸ್ಥಿತಿಯಲ್ಲಿ ರಾಷ್ಟ್ರಪತಿ

---

**[1]. ಸಂಶೋಧಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.**

**[2]. ಪ್ರಾಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.**

ಭವನದಿಂದ ಬಂದಂತಹ ಆದೇಶವನ್ನು ಒಪ್ಪಿಕೊಂಡರು ಇದರಿಂದಾಗಿಯೇ ರಾಜ್ಯದ ದಲಿತ ಸಮುದಾಯಗಳಿಗೆ ಅಧಿಕವಾದ ನಷ್ಟವಾಯಿತು, ಏಕೆಂದರೆ ಬಿ ರಾಚಯ್ಯನಂತಹ ನಿಸ್ವಾರ್ಥ ಸಜ್ಜನ ಮತ್ತು ತಾರತಮ್ಯ ರಹಿತ ರಾಜಕಾರಣಿ ಒಬ್ಬರು ಇಂದಿನ ಕಾಲದಲ್ಲಿ ದಲಿತ ಸಮುದಾಯದಲ್ಲಿ ಕಂಡುಬರುವುದು ತೀರ ಅಪರೂಪವಾಗಿತ್ತು ಹೀಗಾಗಿಯೇ ಬಿ.ರಾಚಯ್ಯ ಅವರು ರಾಜ್ಯಪಾಲರಾಗಿ ತೆಳುತ್ತಿದ್ದರಿಂದ ದಲಿತ ಸಮುದಾಯದ ಜನತೆಗೆ ಬೇಸರ ಉಂಟಾದರೂ ದಲಿತರು ಅದನ್ನು ಸಹಿಸಿಕೊಳ್ಳುವುದೇ ಅನಿವಾರ್ಯವಾಯಿತು ಕಾರಣವೆಂದರೆ ರಾಜ್ಯದಿಂದ ಪ್ರಥಮ ಬಾರಿಗೆ ದಲಿತ ವ್ಯಕ್ತಿ ಒಬ್ಬರು ರಾಜ್ಯಪಾಲರಾಗಿ ನೇಮಿತವಾಗಿರುವುದು ದಲಿತರಿಗೆ ಹೆಮ್ಮೆಯ ವಿಷಯವಾಗಿತ್ತು ಇದರಿಂದ ಒಂದು ಕಡೆ ನಷ್ಟವಾದರೂ ಮತ್ತೊಂದು ಕಡೆ ಬಿ.ರಾಚಯ್ಯ ಅವರಂತಹ ಹಿರಿಯ ರಾಜಕಾರಣಿ ರಾಜ್ಯ ಒಂದರ ಕಾರ್ಯಾಂಗದ ಅಧಿಕಾರಿಯಾಗಿ ನೇಮಕವಾಗಿರುವುದು ದಲಿತ ಸಮುದಾಯದ ಜನರಲ್ಲಿ ಸಂತಸವುಂಟು ಮಾಡಿದೆ.

## ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಕಾರ್ಯ ಚಟುವಟಿಕೆ

ಬಿ.ರಾಚಯ್ಯ ಅವರು 1990ರ ಫೆಬ್ರವರಿ 14 ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಅಧಿಕಾರವನ್ನು ಸ್ವೀಕಾರ ಮಾಡಿದರು. ರಾಜ್ಯ ರಾಜಕೀಯದ ಅನುಭವ ಬಿ.ರಾಚಯ್ಯ ಅವರು ಚೆನ್ನಾಗಿ ತಿಳಿದಿದ್ದರು ಸಹ ರಾಜ್ಯಪಾಲರ ಹುದ್ದೆ ಅವರಿಗೆ ಹೊಸದಾಗಿತ್ತು. ರಾಜ್ಯಪಾಲರಾಗಿ ಸೇವೆ ಮಾಡುವುದೆಂದರೆ ರಾಜ್ಯ ಒಂದರ ಕಾರ್ಯಾಂಗದ ಅಧಿಕಾರಿಯಾಗಿ ಬಹಳ ಜವಾಬ್ದಾರಿ ಸ್ಥಾನದಲ್ಲಿ ಇರುವುದರಿಂದ ಮತ್ತು ಅವರಿಗೆ ಇರುವಂತಹ ವಿವೇಚನಾಧಿಕಾರಗಳಿಂದಾಗಿ ತುಂಬಾ ಎಚ್ಚರಿಕೆಯಿಂದ ಅಧಿಕಾರ ಚಲಾಯಿಸುವ ಕೌಶಲ್ಯದ ಅವಶ್ಯಕತೆ ಇತ್ತು. ಒಂದು ವೇಳೆ ತಪ್ಪು ನಿರ್ಧಾರಗಳನ್ನು ಕೈಗೊಂಡರೇ ಅದರಿಂದ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿದ್ದವು, ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಮುನ್ನ ಆ ನಿರ್ಧಾರದ ಸಾಧಕ ಬಾದಕ ಗಳನ್ನು ಗಮನಿಸಿ ತೀರ್ಮಾನ ಕೈಗೊಳ್ಳಬೇಕಿತ್ತು. ಇಂತಹ ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸಿದ ಸಮಯದಲ್ಲಿಯೇ ಹಿಮಾಚಲ ಪ್ರದೇಶದ ವಿಧಾನಸಭೆಗೆ ಚುನಾವಣೆಗಳು ನಡೆದು ಫಲಿತಾಂಶವು ಪ್ರಕಟಗೊಂಡಿತ್ತು. ಆ ಚಟುವಟಿಕೆಯಲ್ಲಿ ಸ್ಪರ್ಧಿಸಿದ ಆಡಳಿತರೂಢ ಕಾಂಗ್ರೆಸ್ ಪಕ್ಷವು ಸೋಲನ್ನು ಅನುಭವಿಸಿತು. ಆ ಪಕ್ಷದ ಎದುರಾಳಿಯಾಗಿದ್ದ ಭಾರತೀಯ ಜನತಾ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗಲಿಲ್ಲ. ಹೀಗಾಗಿ ಸರ್ಕಾರದ ರಚನೆಯ ಕಾರ್ಯಕ್ಕೆ ಸಂಬಂಧಿಸಿದಂತೆ ಸಂದಿಗ್ಧತೆ ಉಂಟಾಯಿತು. ಆ ಸಮಯದಲ್ಲಿ ಕೇಂದ್ರದಲ್ಲಿ ವಿ.ಪಿ ಸಿಂಗ್ ಸರ್ಕಾರಕ್ಕೆ ಬೆಂಬಲ ನೀಡಿದ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಮುಖಂಡರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್.ಕೆ ಅಡ್ವಾಣಿ ಅವರುಗಳು ಬಿ.ರಾಚಯ್ಯ ಅವರ ಮೇಲೆ ಭಾರತೀಯ ಜನತಾ ಪಕ್ಷಕ್ಕೆ ಸರ್ಕಾರ ರಚಿಸಲು ಅವಕಾಶ ಕಲ್ಪಿಸುವಂತೆ ಒತ್ತಡ ಏರಿದರು ಬಿ ರಾಚಯ್ಯ ಅವರು ತಕ್ಷಣ ನಿರ್ಧಾರವನ್ನು

ಪ್ರಕಟಿಸಲಿಲ್ಲ. ಬದಲಾಗಿ ಭಾರತೀಯ ಜನತಾ ಪಕ್ಷಕ್ಕೆ ಸರ್ಕಾರ ರಚಿಸಲು ಇದ್ದ ಸಾಧ್ಯತೆಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಿ ಮನವರಿಕೆ ಮಾಡಿಕೊಟ್ಟ ನಂತರ ಸರ್ಕಾರ ರಚನೆಗೆ ಭಾರತೀಯ ಜನತಾ ಪಕ್ಷದ ಶಾಸಕಾಂಗದ ನಾಯಕನಾಗಿದ್ದ ಶಾಂತಕುಮಾರ್ ಅವರನ್ನು ಆಹ್ವಾನ ನೀಡುವ ಮೂಲಕ ತಮಗಿದ್ದ ಸಂವಿಧಾನದತ್ತ ಅಧಿಕಾರವನ್ನು ವಿವೇಚನ ನ್ಯಾಯಯುತವಾಗಿ ಚಲಾಯಿಸಲು ರಾಜಕೀಯ ಪ್ರಬುದ್ಧತೆಯನ್ನು ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ ಪ್ರಾರಂಭದಲ್ಲಿಯೇ ಪ್ರದರ್ಶಿಸಿದರು.

ಹಿಮಾಚಲ ಪ್ರದೇಶದಂತಹ ರಾಜ್ಯವು ಮಂದಗಾಮಿ ಪ್ರವೃತ್ತಿವುಳ್ಳ ಮತ್ತು ಸಂಪ್ರದಾಯ ಶೀಲ ಗುಣವನ್ನು ಹೊಂದಿದ್ದ ಬಿ ರಾಚಯ್ಯ ಅವರಿಗೆ ಹೇಳಿ ಮಾಡಿಸಿದಂತಹ ಪ್ರದೇಶವಾಗಿತ್ತು. ಏಕೆಂದರೆ ಬಿ.ರಾಚಯ್ಯ ಅವರು ಸಂಘರ್ಷ ಪ್ರವೃತ್ತಿಗಳಿಗೆ ಮತ್ತು ಅನಗತ್ಯ ರಾಜಕೀಯ ಕಚ್ಚಾಟಗಳಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಹಿಮಾಚಲ ಪ್ರದೇಶದಲ್ಲಿ ಇವೆರಡನ್ನು ಹೊರತುಪಡಿಸಿದ ರಾಜಕೀಯ ವ್ಯವಸ್ಥೆ ಇತ್ತು ಇಲ್ಲಿನ ಜನರು ಸಹ ಬಿ.ರಾಚಯ್ಯನವರಂತೆ ಸಂಪ್ರದಾಯಶೀಲರು ಸುಸಂಸ್ಕೃತರು ಮತ್ತು ಸಹನಾ ಶೀಲ ಗುಣಗಳುಳ್ಳವರಗಿದರು. ಇಲ್ಲಿ ರಾಜಕೀಯ ಸಂಘರ್ಷಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದವು. ಇದಕ್ಕೆ ಕಾರಣವೆಂದರೆ ಇಲ್ಲಿನ ಜನ ರಾಜಕಾರಣದ ಬಗ್ಗೆ ಆಗಲಿ, ಅಧಿಕಾರದ ಬಗೆಯಾಗಲಿ, ಹೆಚ್ಚಿನ ಆಸಕ್ತಿ ಹೊಂದಿರಲಿಲ್ಲ. ಹಾಗೂ ಬಹುತೇಕ ಜನರು ಅಧಿಕಾರ ರಾಜಕಾರಣದಿಂದ ದೂರವೇ ಉಳಿದಿದ್ದರಿಂದ ಸಂಘರ್ಷಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದವು. ಹಾಗೆಯೇ ಎಲ್ಲಿ ರಾಜಕೀಯ ಪಕ್ಷಗಳ ಪ್ರಭಾವವು ಅಷ್ಟಾಗಿ ಕಂಡು ಬರುತ್ತಿರಲಿಲ್ಲ. ಪ್ರಾರಂಭದಲ್ಲಿ ಕೇವಲ ಕಾಂಗ್ರೆಸ್ ಪಕ್ಷ ಪ್ರಬಲವಾಗಿದ್ದರು ಕ್ರಮೇಣ ಭಾರತೀಯ ಜನತಾ ಪಕ್ಷ ತನ್ನದೇ ಆದ ನೆಲೆ ಸ್ಥಾಪಿಸಿಕೊಂಡಿತು. ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಮೇಲೆ ಸ್ವಾತಂತ್ರ್ಯ ಚಳುವಳಿಯ ಆದರ್ಶಗಳು ಪ್ರಭಾವ ಬೀರಿದರೆ, ಸಂಪ್ರದಾಯವಾದಿ ಮನೋಭಾವವುಳ್ಳವರು ಭಾರತೀಯ ಜನತಾ ಪಕ್ಷದ ಬೆಳವಣಿಗೆಗೆ ಅವಕಾಶ ಕಲ್ಪಿಸಿದರು. ಈಗ ಅಲ್ಲಿ ಅಸ್ತಿತ್ವದಲ್ಲಿ ಎರಡು ರಾಜಕೀಯ ಪಕ್ಷಗಳು ಬೇರೆ ಬೇರೆ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದವು. ಭಾರತದ ಇತರೇ ಭಾಗಗಳಲ್ಲಿ ಇದ್ದಂತಹ ರಾಜಕೀಯ ಸಂಘರ್ಷ ಇರಲಿಲ್ಲ. ಹಾಗೂ ರಾಜಕೀಯ ಪಕ್ಷಗಳಲ್ಲಿ ಪ್ರಬಲ ಗುಂಪುಗಾರಿಕೆಗಳು ಇಲ್ಲದಿರುವುದು ಬಿ.ರಾಚಯ್ಯನವರಂತಹ ಸೌಮ್ಯ ಸ್ವಭಾವದ ವ್ಯಕ್ತಿಗಳ ಕಾರ್ಯನಿರ್ವಹಣೆಯ ಹಾದಿಯನ್ನು ಸುಗಮಗೊಳಿಸಿತು.

ಹಿಮಾಚಲ ಪ್ರದೇಶದಲ್ಲಿ ಕಂಡು ಬರುತ್ತಿದ್ದ ಮತ್ತೊಂದು ಬಹು ಮುಖ್ಯ ಉತ್ತಮ ಅಂಶವೆಂದರೆ ಜಾತಿ ಸಂಘರ್ಷದ ವ್ಯವಸ್ಥೆಯಿಂದ ಆ ರಾಜ್ಯವು ಮುಕ್ತವಾಗಿತ್ತು. ಬಿ.ರಾಚಯ್ಯ ಅವರು ಸಹ ಜಾತಿ ಸಂಘರ್ಷದ ವಿರೋಧಿಯಾಗಿ ಅಲ್ಲಿನ ಅಂತಹ ಸಾಮಾಜಿಕ ವಾತಾವರಣ ಅವರಿಗೆ ತುಂಬಾ ಇಷ್ಟವಾಗಿತ್ತು. ಜನರು ಸಂಪ್ರದಾಯ ಶೀಲಾ ಗುಣವಂತರಾಗಿದ್ದರು, ಜಾತಿ ಪರಿಕಲ್ಪನೆಗೆ ಆದ್ಯತೆ ನೀಡಲಿಲ್ಲ

ಮತ್ತು ಜಾತಿ ಆಧಾರದ ಮೇಲೆ ಜನತೆಯಲ್ಲಿ ಮತ್ತು ರಾಜಕೀಯ ಪಕ್ಷಗಳಾಗಲ್ಲಿ ಸಂಘಟಿತವಾಗಿರಲಿಲ್ಲ. ಇಂತಹ ದೃಷ್ಟಿಕೋನಕ್ಕೆ ಸ್ಪಷ್ಟ ಕಾರಣಗಳನ್ನು ಗುರುತಿಸುವುದು ಕಷ್ಟವಾದರೂ ತಾರ್ಕಿಕವಾಗಿ ಹೇಳುವುದಾದರೆ ಗುಡ್ಡಗಾಡು ಪ್ರದೇಶದಿಂದ ಕೂಡಿದ್ದ ಈ ರಾಜ್ಯದಲ್ಲಿ ಜನರು ಗುಂಪು ಗುಂಪಾಗಿ ವಾಸಿಸುವುದು ಕಷ್ಟವಾಗಿತ್ತು. ವಾಸಕೆ ಯೋಗ್ಯವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡ ಜನರು ದೂರ ದೂರ ಪ್ರದೇಶಗಳಲ್ಲಿ ತಮಗೆ ಸೀಮಿತ ಪ್ರಮಾಣದಲ್ಲಿ ಗುಂಪು ಮಾಡಿಕೊಂಡು ವಾಸವಾಗಿದ್ದರಿಂದ ಪರಸ್ಪರರಲ್ಲಿ ಸಂಘರ್ಷಗಳು ಕಡಿಮೆ ಪ್ರಮಾಣದಲ್ಲಿ ಇತ್ತು. ಇದರಿಂದಾಗಿ ಜಾತಿ ಸಂಘರ್ಷಗಳಿಗೆ ಅಥವಾ ಜಾತಿ ತಾರತಮ್ಯಗಳಿಗೆ ಅವಕಾಶಗಳು ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಿದ್ದವು. ಅಲ್ಲಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಪ್ರಭಾವವನ್ನು ಕಾಣಬಹುದಾಗಿತ್ತಾದರೂ ಅದು ಸಮಾಜವನ್ನು ಬದಲಾಯಿಸುವ ಅಥವಾ ಸಂಘರ್ಷ ಉಂಟು ಮಾಡುವಷ್ಟು ಪ್ರಭಾವಿತವಾಗಿರಲಿಲ್ಲ. ಎಲ್ಲಾ ಸಮುದಾಯದವರು ಹೊಂದಿಕೊಂಡು ಬದುಕುತ್ತಿದ್ದರು. ಈ ಅಂಶವು ಸಹ ಬಿ.ರಾಚಯ್ಯ ಅವರ ಮೇಲಿನ ಜವಾಬ್ದಾರಿಯನ್ನು ಕಡಿಮೆ ಮಾಡಿತ್ತು ಎಂದರೆ ತಪ್ಪಾಗಲಾರದು. ಬಿ.ರಾಚಯ್ಯ ಅವರು ತಾವು ಸಮಾರಂಭಗಳಿಗೆ ಹೋದಾಗ ದಲಿತರ ಸಮಸ್ಯೆಗಳನ್ನು ವಿಚಾರಿಸುತ್ತಿದ್ದರು ಅಲ್ಲಿ ದಲಿತ ಸಮುದಾಯಗಳ ಪರವಾಗಿ ಮಾಡಬೇಕಾದ ಕಾರ್ಯಗಳು ಮತ್ತು ಅವರ ಪರವಾಗಿ ತೆಗೆದುಕೊಳ್ಳಬೇಕಾದ ನಿರ್ಧಾರಗಳು ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತಿರಲಿಲ್ಲ. ಏಕೆಂದರೆ ಎಲ್ಲಿ ತಾರತಮ್ಯದ ಸಮಸ್ಯೆಗಳು ತುಂಬಾ ಕಡಿಮೆ ಇದ್ದಿದ್ದರಿಂದಲೇ ಬಿ ರಾಚಯ್ಯ ಅವರ ಆಡಳಿತದ ಕಾರ್ಯ ಸುಗಮವಾಗಿತ್ತು.

ಬಿ.ರಾಚಯ್ಯ ಅವರಲ್ಲಿದ್ದ ಶಾಂತ ಸ್ವಭಾವದ ರಾಜಕೀಯ ಅನುಭವ ಮತ್ತು ತಾಳ್ಮೆ ಎಂತಹ ಸನ್ನಿವೇಶದಲ್ಲಿಯೂ ಸಹ ಉದ್ವೇಗಕ್ಕೆ ಒಳಗಾಗದೆ ಬುದ್ಧಿವಂತಿಕೆಯಿಂದ ನಯವಾಗಿ ಆ ಸನ್ನಿವೇಶಕ್ಕೆ ಬಂದಿರುವ ಆಪತ್ತನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಯಾವುದೇ ಸಮಯದ ಯುಕ್ತಯುಕ್ತತೆಯನ್ನು ಅರ್ಥ ಮಾಡಿಕೊಂಡು ನಿರ್ಧಾರ ತೆಗೆದುಕೊಳ್ಳುವ ಗುಣವನ್ನು ಬೆಳೆಸಿಕೊಂಡಿದ್ದ ಬಿ.ರಾಚಯ್ಯ ಅವರು ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿಯೇ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದ ವಿ.ಪಿ ಸಿಂಗ್ ರವರು ಮಂಡಲ್ ವರದಿಯನ್ನು ಜಾರಿಗೆ ತಂದು ಹಿಂದುಳಿದ ಮತ್ತು ಶೋಷಿತ ಸಮುದಾಯಗಳಿಗೆ ಕೇಂದ್ರದ ಆಡಳಿತಾಂಗದಲ್ಲಿ ಪಾಲು ಪಡೆಯಲು ಅವಕಾಶ ಕಲ್ಪಿಸಿದರು. ವಿ.ಪಿ. ಸಿಂಗ್ ಅವರ ಈ ನಿರ್ಧಾರ ಜೇನುಗೂಡಿಗೆ ಕಲ್ಲು ಎಸೆದಂತಹ ಪರಿಸ್ಥಿತಿಯನ್ನು ನಿರ್ಮಿಸಿತು. ಇಂತಹ ನಿರ್ಧಾರ ಭಾರತೀಯ ಸಮಾಜದ ಮೇಲ್ವರ್ಗಗಳ ಜನರನ್ನು ಕೆಳಿಸಿತು. ರಾಷ್ಟ್ರವ್ಯಾಂತ ಮಂಡಲ ವರದಿಯ ವಿರೋಧಿ ಪ್ರತಿಭಟನೆಗಳು ಪ್ರಾರಂಭವಾದವು. ಹಿಂದಿನ ಪ್ರಧಾನ ಮಂತ್ರಿಗಳು ಇಂತಹ ಪರಿಸ್ಥಿತಿಗೆ ಹೆದರಿ ಮಂಡಲ ವರದಿಯನ್ನು ಜಾರಿಗೆ ತರುವ ಧೈರ್ಯ ಮಾಡಿರಲಿಲ್ಲ. ವಿ.ಪಿ ಸಿಂಗ್ ಅವರು ಇದಕ್ಕೆ ಹೆದರದೆ ಮಂಡಲ ವರದಿಯನ್ನು ಜಾರಿಗೊಳಿಸಿದರು. ಈ

ಸಮಯದಲ್ಲಿ ಶಾಂತ ಸ್ವಭಾವಕ್ಕೆ ಹೆಸರಾದ ಹಿಮಾಚಲ ಪ್ರದೇಶದ ಮೇಲ್ವರ್ಗದ ಜನರು ಸಹ ಕೆರಳಿ ಪ್ರತಿಭಟನೆಗೆ ಮುಂದಾದರು. ಇದರ ಅಂಗವಾಗಿ ಜಾಥವೊಂದನ್ನು ಏರ್ಪಡಿಸಿ ರಾಜಭವನಕ್ಕೆ ಮುತ್ತಿಗೆ ಹಾಕಿದರು. ಈ ಸಂದರ್ಭದಲ್ಲಿ ಬಿ ರಾಚಯ್ಯ ಅವರು ರಾಜ ಭವನದಲ್ಲಿಯೇ ಇದ್ದು, ತುಂಬ ಸಂಯಮದಿಂದ ವರ್ತಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿ ಪ್ರತಿಭಟನಾಕಾರರನ್ನು ಮಾತುಕತೆಗೆ ಆಹ್ವಾನಿಸಿ ವಸ್ತು ಸ್ಥಿತಿಯನ್ನು ವಿವರಿಸಿ ಅವರಿಂದ ಮನವಿಯನ್ನು ಪಡೆದು ಸಮಾಧಾನಪಡಿಸಿ ಕಳುಹಿಸಿದರು. ಹೀಗೆ ಬಿ.ರಾಚಯ್ಯ ಅವರು ಎಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಧೃತಿಗೆಡದೆ ಸಮಾಧಾನದಿಂದಲೇ ನಿಭಾಯಿಸುತ್ತಿದ್ದರು.

ಬಿ.ರಾಚಯ್ಯ ಅವರು ರಾಜ್ಯಪಾಲರಾಗಿ ನೇಮಕವಾಗುವ ಸಮಯದಲ್ಲಿ 70 ವರ್ಷಗಳನ್ನು ಪೂರೈಸಿದರು. ಈ ವೇಳೆಗೆ ಅವರು ವಯಸ್ಸಿನ ಮಿತಿಯನ್ನು ದಾಟಿದ್ದರು. ವಯಸ್ಸಿಗೆ ಅನುಗುಣವಾಗಿ ಬಿ.ರಾಚಯ್ಯನವರಿಗೆ ದೈಹಿಕ ಸ್ಥಿತಿಗತಿಗಳು ಬದಲಾಗಿದ್ದವು. ಅವರ ಆರೋಗ್ಯದಲ್ಲಿ ಕೆಲವೊಂದು ಬದಲಾವಣೆಗಳಾಗಿದ್ದು, ಒಮ್ಮೆ ಲಘು ಪ್ರಮಾಣದ ಹೃದಯಾಘಾತಕ್ಕೆ ಒಳಗಾಗಿದ್ದರು. ಜೊತೆಗೆ ಇವರು ಈ ಹಿಮಾಚಲ್ ಪ್ರದೇಶಕ್ಕೆ ರಾಜ್ಯಪಾಲರಾಗಿ ಹೋಗಿರುವುದು ಫೆಬ್ರವರಿ ತಿಂಗಳಾಗಿದ್ದರಿಂದ ನಂತರದ ಅವಧಿಯಲ್ಲಿ ಅಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳುವುದು ಸುಲಭವಲ್ಲ. ಆದರೆ ಚಳಿಗಾಲ ಪ್ರಾರಂಭವಾದಂತೆ ಸಮಸ್ಯೆಗಳು ಅಧಿಕವಾದವು. ಕರ್ನಾಟಕ ಮತ್ತು ಹಿಮಾಚಲ ಪ್ರದೇಶದ ರಾಜ್ಯಗಳ ನಡುವಿನ ಪರಸ್ಪರ ಹವಾಗುಣದಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ, ಕರ್ನಾಟಕದಲ್ಲಿ ಉಷ್ಣಾಂಶವು 18 ಸೆಲ್ಸಿಯಸ್ ಗಿಂತಲೂ ಕಡಿಮೆ ಇರುತ್ತಿರಲಿಲ್ಲ. ಆದರೆ ಹಿಮಾಚಲ ಪ್ರದೇಶದಲ್ಲಿ ಉಷ್ಣತೆಯು ಡಿಸೆಂಬರ್ ತಿಂಗಳಲ್ಲಿ 0 ಸೆಲ್ಸಿಯಸ್ ಗಿಂತಲೂ ಕಡಿಮೆ ಇರುತ್ತದೆ. ಹಿಂದೆ ಪಾರ್ಲಿಮೆಂಟ್ ಸದಸ್ಯರಾಗಿದ್ದ ಸಮಯದಲ್ಲಿ ದೆಹಲಿಯ ಚಳಿಯನ್ನು ಅನುಭವಿಸಿದರು ಆದರೆ ಅಂದಿನ ವಯೋಮಾನಕ್ಕೆ ಮತ್ತು ರಾಜ್ಯಪಾಲರಾಗಿದ್ದ ಸಮಯದ ವಯೋಮಾನಕ್ಕೂ ತುಂಬಾ ವ್ಯತ್ಯಾಸವಿದೆ. 70 ವರ್ಷಗಳನ್ನು ದಾಟಿದ ಬಿ.ರಾಚಯ್ಯ ಅವರಿಗೆ ಹಿಮಾಚಲ ಪ್ರದೇಶದ ಚಳಿಯನ್ನು ಸಹಿಸಿಕೊಳ್ಳುವುದು ಅಸಾಧ್ಯವಾಗಿತ್ತು. ಇದೇ ಸಮಯಕ್ಕೆ ಹಿಮಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದ ರಾಷ್ಟ್ರಪತಿಗಳಾಗಿದ್ದ ಆರ್.ಕೆ.ವೆಂಕಟರಾಮನ್ ರವರು ರಾಜ ಭವನಕ್ಕೆ ಆತಿತ್ಯಕ್ಕೆಂದು ತೆರಳಿದರು. ಅನಾರೋಗ್ಯ ಪೀಡಿತರಾಗಿದ್ದರು ಬಿ.ರಾಚಯ್ಯ ಅವರೇ ಮುಂದೆ ನಿಂತು ರಾಷ್ಟ್ರಪತಿಗಳನ್ನು ಸ್ವಾಗತಿಸಿದರು. ಅಲ್ಲಿ ತಂಗಿದ್ದ ಸಮಯದಲ್ಲಿ ರಾಷ್ಟ್ರಪತಿಗಳು ಬಿ.ರಾಚಯ್ಯ ಅವರ ಆರೋಗ್ಯದ ಸ್ಥಿತಿಯನ್ನು ಸಮೀಪದಿಂದ ಗಮನಿಸಿ ಅವರಿಗೆ ದಕ್ಷಿಣದ ಯಾವುದಾದರೂ ಒಂದು ರಾಜ್ಯಕ್ಕೆ ರಾಜ್ಯಪಾಲರಾಗಿ ತೆರಳಲು ಸಲಹೆ ನೀಡಿದರು. ಈ ಸಲಹೆಯನ್ನು ಸಂತೋಷದಿಂದ ಅಂಗೀಕರಿಸಿದ ಬಿ.ರಾಚಯ್ಯ ಅವರು ರಾಷ್ಟ್ರಪತಿಗಳನ್ನು ಕುರಿತು, ತಾವು ಅನುಮತಿ ನೀಡುವುದಾದರೆ ಇದಕ್ಕೆ ತಯಾರಾಗಿರುವುದಾಗಿ ತಿಳಿಸಿದರು.

ಮಂಡಲ ವರದಿಯ ಅನುಷ್ಠಾನದಿಂದಾಗಿ ವಿ.ಪಿ ಸಿಂಗ್ ಅವರು ತಮ್ಮ ಪ್ರಧಾನಿ ಹುದ್ದೆಯನ್ನು ತ್ಯಾಜಿಸಬೇಕಾಗಿ ಬಂದಿತು. ತೆರವಾದ ಪ್ರಧಾನಿ ಹುದ್ದೆಯನ್ನು ಕಾಂಗ್ರೆಸ್ ಬೆಂಬಲದೊಂದಿಗೆ ಜನತಾದಳದ ಮತ್ತೊಬ್ಬ ನಾಯಕನಾಗಿದ್ದ ಚಂದ್ರಶೇಖರ್ ಅವರು ಅಲಂಕರಿಸಿದರು. ಬಿ.ರಾಚಯ್ಯ ಅವರು ಚಂದ್ರಶೇಖರೇ ಅವರಿಗೆ ಈ ಮೊದಲೇ ಚಿರಪರಿಚಿತರಾಗಿದ್ದರಿಂದ ರಾಷ್ಟ್ರಪತಿಗಳು ಪ್ರಧಾನಿಯವರಿಗೆ ಬಿ.ರಾಚಯ್ಯ ಅವರ ಆರೋಗ್ಯದ ಪರಿಸ್ಥಿತಿ ಬಗ್ಗೆ ವಿವರಿಸಿ ಅವರನ್ನು ದಕ್ಷಿಣ ರಾಜ್ಯವೊಂದಕ್ಕೆ ವರ್ಗಾಯಿಸುವಂತೆ ತಿಳಿಸಿದರು. ಇದಕ್ಕೆ ಸಮ್ಮತಿ ನೀಡಿದ ಪ್ರಧಾನಮಂತ್ರಿಯವರು ಬಿ ರಾಚಯ್ಯ ಅವರನ್ನು ವರ್ಗಾಯಿಸಲು ತಮ್ಮ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಿದರು. ಇದಕ್ಕೆ ಅನುಗುಣವಾಗಿ ಬಿ ರಾಚಯ್ಯ ಅವರು ಮತ್ತು ಕೇರಳದಲ್ಲಿ ರಾಜ್ಯಪಾಲರಾಗಿದ್ದ ಡಾ. ಸ್ವರೂಪ್ ಸಿಂಗ್ ಅವರ ಪರಸ್ಪರ ಒಪ್ಪಿಗೆಯ ಮೇರೆಗೆ ಬಿ.ರಾಚಯ್ಯ ಅವರನ್ನು ಕೇರಳ ರಾಜ್ಯಕ್ಕೂ ಮತ್ತು ಡಾ ಸ್ವರೂಪ್ ಸಿಂಗ್ ಅವರನ್ನು ಹಿಮಾಚಲ ಪ್ರದೇಶಕ್ಕೆ ಪರಸ್ಪರ ವರ್ಗಾವಣೆ ಮಾಡಿದರು.

ಅಂತಿಮ ಹೇಳಿಕೆ: ರಾಜ್ಯದಲ್ಲಿ ಯಾವುದೇ ಎರಡು / ಮೂರು ಹುದ್ದೆಗಳನ್ನು ನೀಡಿದರು ಅವುಗಳ ಯಾವುದೇ ರೀತಿಯ ಒತ್ತಡಕ್ಕೆ ಮಣಿಯದೆ ನಿಭಾಯಿಸುತ್ತಿದ್ದಂತಹ ಬಿ ರಾಚಯ್ಯ ಅವರಿಗೆ ಹಿಮಾಚಲ ಪ್ರದೇಶದಲ್ಲಿ ಒಂದು ಹುದ್ದೆಯನ್ನು ನಿಭಾಯಿಸಲು ಕಷ್ಟಕರವಾದ ಪರಿಸ್ಥಿತಿ ಉಂಟಾಯಿತು. ಅದಕ್ಕೆ ಕಾರಣ ವಯಸ್ಸು ಮತ್ತು ಅತಿಯಾದ ಶೀತ ವಾಯುಗುಣದಿಂದಾಗಿ ಕೆಲವು ತಿಂಗಳುಗಳಲ್ಲೇ ಆ ರಾಜ್ಯವನ್ನು ತ್ಯಜಿಸಬೇಕಾಗುವ ಪರಿಸ್ಥಿತಿ ಇವರಿಗೆ ಬಂದಿತು. ಒಬ್ಬ ಆದರ್ಶ ಗುಣಗಳ ರಾಜಕೀಯ ನೈಪುಣ್ಯತೆಯ ವ್ಯಕ್ತಿ ಅವರ ರಾಜಕೀಯ ಜೀವನವು ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಒಂದು ಕಳಂಕವು ಬಾರದ ರೀತಿಯಲ್ಲಿ ಆಡಳಿತ ನೀಡಿದರು. ಎಂಬುದಾಗಿ ಇಂದಿಗೂ ಸಹ ರಾಜಕೀಯ ಭೀಷ್ಮ ಎಂದು ಬಿರದಾಂಕಿತನಾದ ಇವರು ರಾಜಕೀಯ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ರಾಜಕಾರಣಿಗಳಿಗೆ ಆದರ್ಶ ವ್ಯಕ್ತಿಯಾಗಿರುತ್ತಾರೆ.

**ಆಕಾರ ಗ್ರಂಥಗಳು:–**

1. ನಂಜಯ್ಯ ಎಂ ಹೊಂಗನೂರು, ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ – ಬಿ ರಾಚಯ್ಯ, ಸರ್ಕಾರಿ ಮುದ್ರಣಾಲಯ, ವಿಧಾನಸೌಧ ಬೆಂಗಳೂರು, 2001.
2. ನಂಜಯ್ಯ ಎಂ ಹೊಂಗನೂರು, ಬಿ ರಾಚಯ್ಯ ಅವರ ಜೀವನ ಮತ್ತು ರಾಜನೀತಿ, ಬಿ ರಾಚಯ್ಯ ಪ್ರತಿಷ್ಠಾನ, ಮೈಸೂರು, 2001.
3. ನಾಗೇಶ್ ಸೊಸ್ತೆ, ಬಿ ರಾಚಯ್ಯ, ಉದಯ ಭಾನು ಕಲಾಸಂಘ ಪ್ರಕಾಶನ, ಬೆಂಗಳೂರು, 2015,
4. ಅಂಶಿ ಪ್ರಸನ್ನಕುಮಾರ್, ಸಮುದಾಯ ನಾಯಕರು, ರೂಪ ಪ್ರಕಾಶನ, ಮೈಸೂರು 2018,

5. ಚಿನ್ನಸ್ವಾಮಿ ಎನ್ ಸೋಸಲೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2013